<u>ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ</u>

<u>ಕ್ರಿಮಿನಲ್ ಕೇಸ್ ನಂ.288/2018</u>

ಸಿ.ಡಬ್ಲ್ಯೂ:2 ಪಿ.ಡಬ್ಲ್ಯೂ:2

ಸಾಕ್ಷಿಗೆ ದಿನಾಂಕ :-06/07/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಯಾಕುಬ |
| ತಂ/ಗಂ. ಹೆಸರು | ಮೌಲಾಸಾಬ ಶಹಾಪೂರ |
| ವಯಸ್ಸು | 38 ವರ್ಷ |
| ಉದ್ಯೋಗ | ಆಟೋ ಚಾಲಕ |
| ವಾಸಸ್ಥಳ | ದೇವರ ಹಿಪ್ಪರಗಿ |

**<u>ಮುಖ್ಯ ವಿಚಾರಣೆ : ಶ್ರೀ ಎಪಿಪಿ ಯವರಿಂದ</u>**

ದಿನಾಂಕ 06-12-2017 ರಂದು ದೇವರ ಹಿಪ್ಪರಗಿ ಗ್ರಾಮದ ವಿಜಯಪೂರ ಹೋಗುವ ರಸ್ತೆಯ ಉರ್ದು ಪ್ರೌಢ ಶಾಲೆಯ ಮುಂದೆ ಒಂದ ಅಪಘಾತವಾಗಿದ್ದು ನಾನು ಅಲ್ಲಿದ್ದಾಗ ಪೋಲಿಸರು ನನ್ನನ್ನು ಕರೆಯಿಸಿ ಪಂಚನಾಮೆ ತಯಾರಿಸಿರುತ್ತಾರೆ. ಆಗ ನನ್ನ ಜೊತೆ ಚಾಸಾ 3 ರವರು ಇದ್ದರು. ಪಂಚನಾಮೆಯನ್ನು ಮದ್ಯಾಹ್ನ 3.30 ರಿಂದ 4.30 ಗಂಟೆಯವರೆಗೆ ಪಂಚನಾಮೆ ತಯಾರಿಸಿರುತ್ತಾರೆ. ಆಬಿದ್ ಎನ್ನುವ ಹುಡಗನಿಗೆ ಅಪಘಾತವಾಗಿತ್ತು. ಪಂಚನಾಮೆ ಸಮಯದಲ್ಲಿ ಪೋಲಿಸರು ಭಾವ ಚಿತ್ರ ತೆಗೆದಿರುತ್ತಾರೆ. ಭಾವ ಚಿತ್ರವನ್ನು ತೆಗೆದಿರುತ್ತಾರೆ ಬೆರೆ ಏನು ನನ್ನಕಡೆಯಿಂದ ತೆಗೆದುಕೊಂಡಿರುತ್ತಾರೆ. ಅಲ್ಲಿಂದ ನಂತರ ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ಠಾಣೆಯಲ್ಲಿ ಕೂಡಾ ಭಾವ ಚಿತ್ರ ತೆಗೆದಿರುತ್ತಾರೆ. ಪೋಲಿಸ್ ಠಾಣೆಯಲ್ಲಿ ಅಪಘಾತವಾದ ವಾಹನಗಳ ಮಧ್ಯ ಆಗಿರುವುದನ್ನು ತೋರಿಸಿರುತ್ತಾರೆ. ಅಲ್ಲಿ ಒಂದು ವಾಹನ ಇತ್ತು. ಸ್ಪ್ಲೆಂಡರ ಮೋಟಾರ ಸೈಕಲ್ ಇತ್ತು. ನನಗೆ ವಾಹನ ನಂಬರ ನೆನಪಿಲ್ಲ. ಪೋಲಿಸ್ ಠಾಣೆಗೆ ಹೋದಾಗ ಸಂಜೆ 5 ರಿಂದ 5.30 ಗಂಟೆ ಆಗಿತ್ತು. ಅಲ್ಲಿಯು ಕೂಡಾ ಚಾ ಸಾ 3 ರವರು ನನ್ನ ಜೊತೆ ಬಂದಿದ್ದ. ನಮ್ಮೊಂದಿಗೆ ಗಾಯಾಳು ಆಭಿದ ತಂದೆ ಚಾ ಸಾ 1 ರವರು ಇದ್ದರು. ನಮ್ಮ ಸಮಕ್ಷಮ ಯಾವುದೇ ದಾಖಲೆ ಬರೆದಿಲ್ಲ. ಅಪಘಾತ ಯಾರ ಕಡೆಯಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ.

ಸದರಿ ವಾಹನ ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಈಗ ನನಗೆ ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಅದರಲ್ಲಿ ಸಾಕ್ಷಿಯು ತನ್ನ ಸಹಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದೆ. ಸಾಕ್ಷಿಯ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ. 2 ಬಿ ಎಂದು ಗುರುತಿಸಲಾಯಿತು. ಜಪ್ತುಪಪಂಚನಾಮೆ ನಿಪಿ. 3 ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಸಾಕ್ಷಿ ಒಂದು ಭಾವ ಚಿತ್ರ ನೋಡಿ ತನ್ನ ಇರುವಿಕೆ ನೋಡಿ ಗುರುತಿಸಿದ್ದರಿಂದ ಅದನ್ನು

ನಿಪಿ 4 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು **ಭಾಗಶ** ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು : ಎ.ಪಿ.ಪಿ. ಯವರಿಂದ</u>

ದಿನಾಂಕ 08-12-2017 ರಂದು ಪಂಚನಾಮೆ ಮಾಡಿರುತ್ತಾರೆ ಎಂದರೆ ನಿಜ. ಪೋಲಿಸ ಠಾಣೆಗೆ ಕರೆದುಕೊಂಡು ವಾಹನ ಜಪ್ತುಪಡಿಸಿಕೊಂಡಿದ್ದು ವಾಹನ ಸಂಖ್ಯೆ ಕೆಎ/28/ಟಿಸಿ/0026 ಅಂತಾ ಇತ್ತು ಎಂದರೆ ಇದ್ದಿರಬಹುದು. ನನಗೆ ಪಂಚನಾಮೆ ಮಾಡುವ ಸಮಯದಲ್ಲಿ ಅಪಘಾತ ಯಾರು ಪಡಿಸಿರುತ್ತಾರೆಎಂದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಪಿ ಎಸ್ ಬಿ ವಕೀಲರಿಂದ</u>**

ಪಂಚನಾಮೆಗೆ ಬರಲು ನನಗೆ ಯಾವುದೇ ನೋಟಿಸ್ ಜಾರಿ ಮಾಡಿಲ್ಲ. ಪಂಚನಾಮೆ ಜಾಗೆಯ ನೋಟಿಸ್ ನೀಡಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ 3 ಗಂಟೆ ಆಗಿತ್ತು. ಉಳಿದವರು ಎಷ್ಟು ಗಂಟೆಗೆ ಬಂದಿದ್ದರು ಎಂದು ನನಗೆ ಮಾಹಿತಿ ಇಲ್ಲ.

ಅಪಘಾತವಾದ ಬಗ್ಗೆ ನನಗೆ ಸ್ವತಹ ಗೊತ್ತಿಲ್ಲ. ಪೋಲಿಸರು ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ. ಸದರಿ ನನ್ನ ಸಮಕ್ಷಮ ಯಾವುದೇ ಜಪ್ತಿ ಮಾಡಿಲ್ಲ. ಬಸ್ಸು ಮತ್ತು ಬುಲೆರೋ ವಾಹನ ನಿಂತಿತ್ತು. ನನಗೆ ಪಂಚನಾಮೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ನಿಜ.

ಮರು ವಿಚಾರಣೆ : ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ